159ನೇ ಅ

(25)

ಕರ್ನಾಟಕ ವಿಧಾನ ಪರಿಷತ್ತು
ಗಮನ ಸೆಳೆಯುವ ಸೂಚನೆ (ನಿಯಮ 72)
ಸದಸ್ಯರ ಹೆಸರು: ಶ್ರೀ ಕಿಶೋರ್ ಕುಮಾರ್ ಪುತ್ತೂರು
ಉತ್ತರಿಸುವ ದಿನಾಂಕ:19.08.2026

ಸೂಚನೆ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಲವು ವರ್ಷಗಳ ಹಿಂದೆ ಕೃಷಿ ತೋಟಗಳಲ್ಲಿ ಕೀಟನಾಶಕವಾಗಿ ಬಳಸಲಾಗಿದ್ದ Endosulfan ರಾಸಾಯನಿಕದ ಪರಿಣಾಮದಿಂದಾಗಿ ಸಾವಿರಾರು ಜನರು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಒಳಗಾಗಿದ್ದಾರೆ. ವಿಶೇಷವಾಗಿ ಮಕ್ಕಳು ಮತ್ತು ಯುವಕರಲ್ಲಿ ಶಾರೀರಿಕ ಅಂಗವೈಕಲ್ಯ, ನರ ಸಂಬಂಧಿತ ಕಾಯಿಲೆಗಳು, ಜನ್ಮಜಾತ ದೋಷಗಳು ಸೇರಿದಂತೆ ಹಲವಾರು ಗಂಭೀರ ಸಮಸ್ಯೆಗಳು ಇದ್ದು, ಅನೇಕ ಕುಟುಂಬಗಳು ಸಾಮಾಜಿಕ-ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿವೆ.

ರಾಜ್ಯ ಸರ್ಕಾರವು ಎಂಡೋಸಲ್ಫಾನ್ ಪೀಡಿತರಿಗೆ ಮಾಸಾಶನ ನೀಡುವ ಯೋಜನೆಯನ್ನು ಜಾರಿಗೆ ತಂದಿದ್ದು, ಪ್ರಸ್ತುತ ಶೇಕಡಾ 25 ರಿಂದ 59 ರಷ್ಟು ಅಂಗವೈಕಲ್ಯ ಹೊಂದಿರುವವರಿಗೆ ತಿಂಗಳಿಗೆ ರೂ.2000 ಮತ್ತು ಶೇ. 60 ರಷ್ಟು ಹಾಗೂ ಅದಕ್ಕಿಂತ ಹೆಚ್ಚು ಅಂಗವೈಕಲ್ಯ ಹೊಂದಿರುವವರಿಗೆ ತಿಂಗಳಿಗೆ ರೂ.4000 ಮಾಸಾಶನ ನೀಡಲಾಗುತ್ತಿದೆ. ಆದರೆ, ಇಂದಿನ ದಿನಗಳಲ್ಲಿ ವೈದ್ಯಕೀಯ ಚಿಕಿತ್ಸೆ, ಔಷಧಿ ವೆಚ್ಚ, ಪೋಷಣೆ ಹಾಗೂ ದೈನಂದಿನ ಜೀವನ ಖರ್ಚುಗಳು ಬಹಳಷ್ಟು ಹೆಚ್ಚಿರುವುದರಿಂದ ಈ ಮೊತ್ತವು ಪೀಡಿತರ ಜೀವನ ಸಾಗಿಸಲು ಸಾಕಾಗುವುದಿಲ್ಲ. ಅನೇಕ ಕುಟುಂಬಗಳಲ್ಲಿ ಪೀಡಿತರು ಸಂಪೂರ್ಣವಾಗಿ ಇತರರ ಮೇಲೆ ಅವಲಂಬಿತರಾಗಿರುವುದರಿಂದ ಅವರ ಪಾಲನೆ-ಪೋಷಣೆಗೂ ಹೆಚ್ಚಿನ ಆರ್ಥಿಕ ಭಾರ ಉಂಟಾಗಿದೆ.

ಹೀಗಾಗಿ ಮಾನವೀಯ ದೃಷ್ಟಿಯಿಂದ ಸರ್ಕಾರವು ಎಂಡೋಸಲ್ಫಾನ್ ಪೀಡಿತರಿಗೆ ನೀಡುತ್ತಿರುವ ಮಾಸಾಶನವನ್ನು ಗಮನಾರ್ಹವಾಗಿ ಹೆಚ್ಚಿಸುವುದು ಅಗತ್ಯವಾಗಿದೆ. ಆದ್ದರಿಂದ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವ ಎಂಡೋಸಲ್ಫಾನ್ ಪೀಡಿತರ ಜೀವನೋಪಾಯವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಕುರಿತು ಸರ್ಕಾರ ತುರ್ತು ಕ್ರಮ ಕೈಗೊಳ್ಳುವಂತೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

**ಸರ್ಕಾರದ ಉತ್ತರ**

ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ರಿಟ್ ಅರ್ಜಿ ಸಂಖ್ಯೆ: 41052/2012 ರ ದಿನಾಂಕ: 02/02/2015 ರನ್ವಯ ಎಂಡೋಸಲ್ಫಾನ್ ಸಂತ್ರಸ್ತರಿಗೆ ಮಾಸಿಕ ಮಿತವೇತನವನ್ನು ದಿನಾಂಕ:01.04.2015 ರನ್ವಯ ಕಂದಾಯ ಇಲಾಖೆ ಮುಖಾಂತರ ವಿತರಿಸಲು ಆದೇಶಿಸಲಾಗಿದೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಎಂಡೋಸಲ್ಫಾನ್ ಸಂತ್ರಸ್ತರಿಗೆ ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ/184/ಡಿ.ಎಸ್.ಪಿ/2019 ದಿನಾಂಕ: 03.06.2021 ರಂತೆ ಶೇಕಡಾ 25 ರಿಂದ 59 ರಷ್ಟು ಅಂಗವೈಕಲ್ಯ ಹೊಂದಿರುವವರಿಗೆ ತಿಂಗಳಿಗೆ ರೂ.2,000/- ಮತ್ತು 60 ರಷ್ಟು ಹಾಗೂ ಅದಕ್ಕಿಂತ ಹೆಚ್ಚು ಅಂಗವೈಕಲ್ಯ ಹೊಂದಿರುವವರಿಗೆ ತಿಂಗಳಿಗೆ ರೂ.4,000/- ಮಾಸಾಶನ ನೀಡಲಾಗುತ್ತಿದೆ. ಪ್ರಸ್ತುತ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

**ಕಡತ ಸಂ.** ಕಂಇ 201 ಕೆಎಟಿ/ಎಸ್ಎಸ್‌ಪಿ/2026

**(ಡಾ|| ಜಿ.ಪರಮೇಶ್ವರ)**
ಉಪ ಮುಖ್ಯಮಂತ್ರಿ